ಓ.ಎಸ್. ನಂಬರ 38/2022

ಡಿ. ಡಬ್ಲ್ಯೂ-1

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 15-02-2024.

**ಪಾಟೀ ಸವಾಲು ಃ ವಾದಿ ಪರ ಶ್ರೀಮತಿ ಡಿ.ಎಸ್.ಎ. ವಕೀಲರಿಂದಃ**

1 ಮತ್ತು 2 ನೇ ವಾದಿಯರು ನನ್ನ ತಂದೆ ಮತ್ತು ಸಹೋದರಿಯಾಗಬೇಕು. ವಾದಿಯರು ದಾವೆಯನ್ನು ಯಾವ ಸ್ವತ್ತಿಗೆ ಸಂಬಂಧಿಸಿ ದಾಖಲಿಸಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿಯು ವಾದಿಯರ ಸ್ವಯಾರ್ಜಿತ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾಸ್ತಿಯು ಸರ್ವೆ ನಂ. 22 ಕ್ಷೇತ್ರ 7 ಎಕರೆ 38 ಗುಂಟೆ , ಸರ್ವೆ ನಂ. 108 ಕ್ಷೇತ್ರ 3 ಎಕರೆ 33 ಗುಂಟೆ ಹಾಗೂ ಸರ್ವೆ ನಂ. 1 ಪ್ಲಾಟ ನಂ. 2, 11 ಗುಂಟೆ ಹಾಗೂ ಪ್ಲಾಟ ನಂ. 3, 8 ಗುಂಟೆ ಇರುತ್ತವೆ. ಸರ್ವೆ ನಂ. 1 ರಲ್ಲಿಯ ಪ್ಲಾಟ ನಂ. 2 ಮತ್ತು 3 ನೇಯವುಗಳು ಬಿನ್‌ಶೇತ್ಕಿ ಜಮೀನುಗಳಾಗಿರುತ್ತವೆ. ಉಳಿದ ಜಮೀನುಗಳು ಶೇತ್ಕಿ ಜಮೀನುಗಳಾಗಿರುತ್ತವೆ. ದಾವಾ ಆಸ್ತಿಗಳು ನಿಮ್ಮ ಅಜ್ಜಿ ಸಾವಿತ್ರವ್ವ ಹಿರೇಮಠ ರವರಿಂದ ನಿಮ್ಮ ತಂದೆಯವರಿಗೆ ದಾನಪತ್ರದ ಮೂಲಕ ಬಂದಂತಹ ಜಮೀನುಗಳಾಗಿರುತ್ತವೆ ಎಂದರೆ ಸರಿಯಲ್ಲ. ಡ. ನಂ. 2243 ರ ಪ್ರಕಾರ ವಾದಿ ನಂ. 1 ನೇಯವರ ಹೆಸರಿಗೆ ದಾನಪತ್ರದ ಮೂಲಕ ಸರ್ವೆ ನಂ. 22 ಹಾಗೂ 108 ನೇ ಜಮೀನುಗಳು ಬಂದಿರುತ್ತವೆ ಎಂದರೆ ಸರಿಯಲ್ಲ. ಅಂದಿನಿಂದ ವಾದಿಯವರೇ ಸದ್ರಿಯವುಗಳನ್ನು ಸಾಗುವಳಿ ಮಾಡುತ್ತಾ ಬರುತ್ತಿದ್ದಾರೆ ಎಂದರೆ ಸರಿಯಲ್ಲ. 1 ನೇ ವಾದಿಯವರನ್ನು ಹೊರತುಪಡಿಸಿ ಬೇರೆ ಯಾರೂ ದಾವಾಸ್ತಿಯಲ್ಲಿ ಸಾಗುವಳಿ ಮಾಡುತ್ತಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿತ 'ಎ' ಆಸ್ತಿಯಲ್ಲಿ ನಿಮ್ಮ ಸಹೋದರ ಪಂಚಾಕ್ಷರಿ ಎಂಬುವರು ಮನೆ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ. ಸದ್ರಿ ಅನುಸೂಚಿತ 'ಎ' ಆಸ್ತಿಯಲ್ಲಿ ನಾನು ವಾಸ್ತವ್ಯ ಮಾಡಿರುವುದಿಲ್ಲ, ಆದರೆ ನನ್ನ ಅಣ್ಣ ಫಕ್ಕೀರಯ್ಯ ರವರು ವಾಸವಾಗಿರುತ್ತಾರೆ. ಸದ್ರಿಯವರು ಸದ್ರಿ ಆಸ್ತಿಯಲ್ಲಿ ವಾಸವಾಗಿರುತ್ತಾರೆ ಎಂದು ತೋರಿಸಲು ನಾನು ಯಾವುದೇ ದಾಖಲಾತಿಗಳನ್ನು ಹಾಜರಪಡಿಸಿರುವುದಿಲ್ಲ. ಸರ್ವೆ ನಂ. 22 ಮತ್ತು 108 ರ ಜಮೀನುಗಳನ್ನು ನಿಮ್ಮ ತಂದೆಯವರಾದ ವಾದಿ ನಂ. 1 ನೇಯವರು ಸಾಗುವಳಿ ಮಾಡುತ್ತಾ ಬಂದಿದ್ದರೂ ಸಹ ನೀವು ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ.

Sd/-

**ಸಿವಿಲ್ ಜಡ್ಜ, ಮುಂಡಗೋಡ.**